1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್.ಸಿ. ನ್ಯಾಯಾಲಯ, ಬೇಲೂರು

**ಅಸಲು ದಾವಾ ನಂ. 248/2019** **ಪಿ ಡಬ್ಲ್ಯೂ :1**

**(ಇಂದು ದಿನಾಂಕಃ 29.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲುಃ– ಪ್ರತಿವಾದಿ ಪರ ವಕೀಲರಾದ ಶ್ರೀ ಬಿ.ಎಸ್.ಜಿ.ಎಸ್ ರವರಿಂದಃ**

ವೀರದೇವನಹಳ್ಳಿ ಗ್ರಾಮದ ಸರ್ವೆ ನಂಬರ್ 92 ರ ಒಟ್ಟು ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿಯು 4 ಎಕರೆ 1 ಗುಂಟೆ ಎಂದು ಉತ್ತರಿಸುತ್ತಾರೆ. ಸದರಿ ಆಸ್ತಿಯ ಪಹಣಿ ಈಗ ನನ್ನ ಹೆಸರಿನಲ್ಲಿರುತ್ತದೆ. ದಾಖಲೆ ನನ್ನ ಹೆಸರಿಗೆ ಬರುವ ಮೊದಲು ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿತ್ತು ಅದರ ಮಧ್ಯದಲ್ಲಿ ಒಂದು ತಿಂಗಳಿನಲ್ಲಿ ಚಂದ್ರಶೇಖರ್ ರವರು ಅವರ ಹೆಸರಿಗೆ ಮಾಡಿಸಿರುತ್ತಾರೆ. ಯಾವ ತಿಂಗಳು ಎಂದರೆ ನನಗೆ ಗೊತ್ತಿಲ್ಲ. ಚಂದ್ರಶೇಖರ್ ಎಂದರೆ ಈ ಪ್ರಕರಣದ ಪ್ರತಿವಾದಿಯೆಂದರೆ ಸರಿ. ಚಂದ್ರಶೇಖರ್ ರವರ ಹೆಸರಿಗೆ ಯಾವ ಆಧಾರದ ಮೇಲೆ ಖಾತೆ ಆಯಿತು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಚಂದ್ರಶೇಖರ್ ರವರ ತಂದೆ ಹೆಸರು ನನಗೆ ಗೊತ್ತಿಲ್ಲ. ಅವರ ಊರು ಪೊನ್ನಾಥಪುರ ಆಗಿರುತ್ತದೆ. ಅವರ ಹೆಸರಿನಲ್ಲಾದ ಖಾತೆ ನಾನು ನೋಡಿರುವುದಿಲ್ಲ.

ಚಂದ್ರಶೇಖರ್ ರವರಿಗೆ ಪೌತಿ ಆಧಾರದ ಮೇಲೆ ಅವರ ತಂದೆಯ ಹೆಸರಿನಲ್ಲಿದ್ದ ಆಸ್ತಿ ಅವರ ಹೆಸರಿಗೆ ಆಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆಯ ಆಸ್ತಿ ನನಗೆ ಸೇರಬೇಕು ಎಂದು ಉತ್ತರಿಸುತ್ತಾರೆ. ನನ್ನ ತಂದೆ ಸಿದ್ದಲಿಂಗನಾಯಕ ರವರ ಹೆಸರಿನಿಂದ ಚಂದ್ರಶೇಖರ್ ರವರ ಹೆಸರಿಗೆ ಖಾತೆ ಆದ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿ. ಪ್ರತಿವಾದಿಯ ಕುಟುಂಬಕ್ಕೂ ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಸಿದ್ದಲಿಂಗನಾಯಕರವರ ಹೆಸರಿಗೆ ಮ್ಯುಟೇಶನ್ ಆಗಿರುತ್ತದೆ. ಯಾವ ವರ್ಷದಲ್ಲಿ ನನ್ನ ತಂದೆಯ ಹೆಸರಿಗೆ ಖಾತೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರಿನಲ್ಲಿದ್ದ ಆಸ್ತಿಯನ್ನು ನೇರವಾಗಿ ನನ್ನ ಹೆಸರಿಗೆ ಮಾಡಿಸಲು ನನಗೆ

ಯಾವುದೇ ತೊಂದರೆ ಇರಲಿಲ್ಲ. ನನ್ನ ತಂದೆ ತೀರಿಕೊಂಡ ನಂತರ ನಾನು ಪೌತಿ ಖಾತೆಗೆ ಅರ್ಜಿ ಕೊಟ್ಟಿದ್ದೆ. ಯಾವಾಗ ಅರ್ಜಿ ಕೊಟ್ಟಿದ್ದೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿ ಮೇಲೆ ಏನು ಆದೇಶ ಆಯಿತು ಎಂದರೆ ನಾಳೆ ಬಾ, ನಾಳೆ ಬಾ ಎಂದು ಸತಾಯಿಸಿರುತ್ತಾರೆಂದು ಉತ್ತರಿಸುತ್ತಾರೆ. ಅದನ್ನು ಪ್ರಶ್ನಿಸಿ ಅಪೀಲು ಸಲ್ಲಿಸಿದ್ದೀರಾ ಎಂದರೆ ನ್ಯಾಯಾಲಯಕ್ಕೆ ಹಾಕಿರುತ್ತೇನೆ ಎಂದು ಉತ್ತರಿಸುತ್ತಾರೆ.

ದಾವಾ ಆಸ್ತಿ ನನ್ನ ತಂದೆ ಸಿದ್ದಲಿಂಗನಾಯಕ ರವರಿಗೆ ಸೇರಿದ್ದಲ್ಲ, ಪ್ರತಿವಾದಿಯ ತಂದೆ ತಿಮ್ಮಯ್ಯ ಉಃ ಕೆಂಚಯ್ಯ ಬಿನ್ ಬಸವಯ್ಯನವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಆಸ್ತಿ ಪ್ರತಿವಾದಿಯ ತಂದೆಗೆ ಇನಾಮ್ ಮಂಜೂರಾದ ಆಸ್ತಿ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ತೀರಿಕೊಂಡ ನಂತರ ಸ್ಥಳ ಪರಿಶೀಲನೆ ಮಾಡಿ ನಕ್ಷೆ ತಯಾರು ಮಾಡಿ ಪ್ರತಿವಾದಿಯ ಹೆಸರಿಗೆ ಇ-ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆಗೆ ಸೇರಿದ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ಹೆಸರಿನಲ್ಲಿದ್ದ ಆಸ್ತಿ ಅವರ ಹೆಸರಿಗೆ ಪೌತಿ ಖಾತೆ ಆಗಿರುವ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ.

ನಿಪಿ-1 ರ ಆಧಾರದ ಮೇಲೆ ಯಾವುದೇ ಖಾತೆ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ತಲವಾರಿಕೆ ಇನಾಮ್ ಎಂದು ಇದ್ದು, ಮಾಲೀಕರ ಹೆಸರು ಇಲ್ಲ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ 4 ಎಕರೆ 6 ಗುಂಟೆ ಬಿಟ್ಟು ಮಾಲೀಕರ ಹೆಸರು, ಇನ್ನಿತರ ಮಾಹಿತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-5 ರಲ್ಲಿ ಯಾವ ಸರ್ವೆ ನಂಬರ್ ಗೆ ಸಂಬಂಧಪಟ್ಟಿದ್ದು ಮತ್ತು ಅದರ ವಿಸ್ತೀರ್ಣ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ-6 ಪಟ್ಟಾ ಪುಸ್ತದಲ್ಲೂ ಕೂಡ ಸರ್ವೆ ನಂಬರ್ ಮತ್ತು ಹೆಸರು ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ-7 ರಲ್ಲೂ ಸಹ ಮಾಲೀಕರ ಹೆಸರು ಇಲ್ಲ ಎಂದರೆ ಸರಿಯಲ್ಲ. ನಾವು ಸ್ವಾಧೀನದಲ್ಲಿ ಇಲ್ಲದಿದ್ದುದ್ದರಿಂದ ಮತ್ತು ಯಾವುದೇ ಬೆಳೆ ಬೆಳೆಯದೇ ಇರುವುದರಿಂದ ನಿಪಿ-7 ಖಾಲಂ 9 ರಲ್ಲಿ ಯಾವುದೇ ಬೆಳೆ ಇಲ್ಲ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಮರಗಳಿದ್ದರೆ ಅದನ್ನು ನಿಪಿ-7 ರಲ್ಲಿ ನಮೂದು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಿಪಿ-8 ರಲ್ಲಿ ಖಾಲಂ 10 ರಲ್ಲಿ ಆರ್ ಆರ್ 117 ಎಂದು ಬರೆದಿರುವುದು ಏನು ಎಂದರೆ ನನಗೆ ಗೊತ್ತಿರುವುದಿಲ್ಲ.

ನಿಪಿ–10 ರಲ್ಲೂ ಸಹ ಮಾಲೀಕರ ಹೆಸರು ನಮೂದು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ನ್ಯಾಯಾಲಯದಿಂದ ಪಡೆದುಕೊಂಡಿರುತ್ತೇನೆ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ಬೇಕು ಎಂದರು ಅದಕ್ಕೆ ತೆಗೆದುಕೊಂಡಿರುತ್ತೇನೆ ಎಂದು ಉತ್ತರಿಸುತ್ತಾರೆ. ನಿಪಿ–12, 13, 14 ಮತ್ತು 15 ರಲ್ಲಿ ಯಾವ ಸರ್ವೆ ನಂಬರ್ ಆಸ್ತಿ ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ–16 ರ ಪ್ರಕಾರ ನನ್ನ ತಂದೆಯ ಹೆಸರಿಗೆ ಖಾತೆ ಆಗಿದೆ ಎಂದು ತೋರಿಸಲು ಎಂ.ಆರ್ ಇಲ್ಲ ಎಂದು ಉತ್ತರ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಸರು ದಾವಾ ಆಸ್ತಿಯಲ್ಲಿ ನಮೂದು ಇಲ್ಲದ ಕಾರಣ, ನಿಪಿ–17 ರ ಪ್ರಕಾರ ನನ್ನ ಹೆಸರು ನಮೂದು ಮಾಡಲು ಅರ್ಜಿ ಕೊಟ್ಟಿದ್ದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನನ್ನ ಹೆಸರು ಪಹಣಿಯಲ್ಲಿ ಸೇರಿಸಬೇಕು ಎಂದು ಕೊಟ್ಟ ಅರ್ಜಿ ಎಂದರೆ ಸರಿ.

ಈ ದಾವಾ ದಾಖಲು ಮಾಡುವ ಪೂರ್ವದಲ್ಲಿ ಪ್ರತಿವಾದಿಯ ವಿರುದ್ಧ. ಅ.ದಾ 21/2018 ಅನ್ನು ದಾಖಲು ಮಾಡಿದ್ದೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಪ್ರತಿವಾದಿಗೆ ಸೇರಿದ್ದರಿಂದ ಅದನ್ನು ಮುಂದುವರಿಸದೇ ವಾಪಸ್ ತೆಗೆದುಕೊಂಡೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ, ಸದರಿ ಪ್ರಕರಣವನ್ನು ವಾಪಸ್ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ಪ್ರತಿವಾದಿಯ ತಂದೆಗೆ ಮಂಜೂರಾದ ಆಸ್ತಿ, ಅದು ಅವರಿಗೆ ಸೇರಿದ್ದು, ಅದರಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಸರಿನಲ್ಲಿರುವ ಖಾತೆ ವಜಾ ಮಾಡಬೇಕು ಎಂದು ಹೇಳಿ ಉಪವಿಭಾಗಧಿಕಾರಿ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿರುತ್ತೇನೆ. ಸದರಿ ಅಪೀಲು ಏನಾಗಿದೆ ಎಂದರೆ ಸಾಕ್ಷಿಯು ವಜಾ ಆಗಿದೆ ಎಂದು ಉತ್ತರಿಸುತ್ತಾರೆ. ನಾನು ಹಾಕಿದ ಅಪೀಲು ನನ್ನ ಪರ ಆಗಿರುತ್ತದೆ. ಅದರ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ತಂದು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಪ್ರತಿವಾದಿಯ ಹೆಸರಿನಲ್ಲಿದ್ದ ಖಾತೆ ವಜಾ ಮಾಡಿ ನನ್ನ ಹೆಸರಿಗೆ ಖಾತೆ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ತಂದೆಯ ಹೆಸರಿನಿಂದ ನನ್ನ ಹೆಸರಿಗೆ ಖಾತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ, ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಕಲೇಶಪುರ ಉಪವಿಭಾಗಾಧಿಕಾರಿ ಸರಿಯಾಗಿ ಪರಿಶೀಲನೆ ಮಾಡದೇ ನನ್ನ ಹೆಸರಿಗೆ ಖಾತೆ ಮಾಡಲು ಆದೇಶಿಸಿರುತ್ತಾರೆ, ಅದರ ಆಧಾರದ ಮೇಲೆ ನಾನು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನನ್ನ ವಿರುದ್ಧ ಶಾಶ್ವತ ನಿರ್ಭಂಧಕಾಜ್ಞೆ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿ ನನ್ನ ವಿರುದ್ಧ ತಾತ್ಕಾಲಿಕ ನಿರ್ಭಂಧಕಾಜ್ಞೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ಆಸ್ತಿಯನ್ನು ಹೇಗಾದರೂ ಮಾಡಿ ಲಪಟಾಯಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿ ಯಾವುದೇ ದಾಖಲೆ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ–1 ಜಾರಿಗೆ ಬರದ ಅಸಿಂಧುವಾದ ಪುನರ್ ಮಂಜೂರಾತಿ ಚೀಟಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ–– ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**